**<u>ಅಸಲು ದಾವಾ ಸಂಖ್ಯೆ:-17/2019</u>** **ಪಿ.ಡಬ್ಲ್ಯೂ:- 1**

ದಿನಾಂಕಃ **01-07-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು:- 6 ರಿಂದ 9 ನೇ ಪ್ರತಿವಾದಿ ಪರ ವಕೀಲರಿಂದ:-</u>**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. 1 ರಿಂದ 3 ನೇ ಪ್ರತಿವಾದಿಗಳು ನನ್ನ ಚಿಕ್ಕಪ್ಪಂದಿರು. 4 ನೇ ಪ್ರತಿವಾದಿ ನನ್ನ ಅತ್ತೆ. 5 ನೇ ಪ್ರತಿವಾದಿ ನನ್ನ ತಂಗಿಯಾಗಬೇಕು. ಸೈಯದ್ ಮೊಹದ್ದೀನ್ ಸಾಬ್, ಸೈಯದ್ ಕರೀಂ ಸಾಬ್, ಸೈಯದ್ ಗೌಸ್ ರವರು ದಿಃ 16-01-1991 ರಂದು ನೋಂದಾಯಿತ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಅದರಂತೆ ಎಂ ಆರ್ ನಂ.19/1992-93 ರಂತೆ ನಮೂದಾಗಿರುತ್ತದೆ ಎಂದರೆ ಸರಿ. ಅದರಂತೆ ಖಾತೆ ಮತ್ತು ಪಹಣಿ ಅವರವರ ಹೆಸರಿಗೆ ನಮೂದಾಗಿರುತ್ತದೆ ಎಂದರೆ ಸರಿ. ಎಂ ಆರ್ ನಂ.ಹೆಚ್ 4/2017-18 ರಂತೆ 1 ನೇ ಪ್ರತಿವಾದಿ ಮತ್ತು ಅವರ ಅಣ್ಣ ತಮ್ಮಂದಿರು ನೋಂದಾಯಿತ ವಿಭಾಗ ಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಅದರಂತೆ ತಮ್ಮಗಳ ಭಾಗಾಂಶಕ್ಕೆ ಬಂದಂತಹ ಆಸ್ತಿಗಳಲ್ಲಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. 3 ನೇ ಪ್ರತಿವಾದಿ ತನ್ನ ಭಾಗಾಂಶಕ್ಕೆ ಬಂದಂತಹ ಆಸ್ತಿಯನ್ನು 6 ನೇ ಪ್ರತಿವಾದಿಗೆ ನಿಪಿ-6 ನೋಂದಾಯಿತ ಕ್ರಯ ಪತ್ರದಂತೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಿಪಿ-6 ನೋಂದಾಯಿತ ಕ್ರಯ ಪತ್ರವನ್ನು 3 ನೇ ಪ್ರತಿವಾದಿ, ಅವರ ಹೆಂಡತಿ ಮತ್ತು ಮಕ್ಕಳು ಸೇರಿ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಿಪಿ-6 ನೋಂದಾಯಿತ ಕ್ರಯ ಪತ್ರದಂತೆ ಸದರಿ ಆಸ್ತಿಯ ಖಾತೆ ಮತ್ತು ಪಹಣಿ 6 ನೇ ಪ್ರತಿವಾದಿಯ ಹೆಸರಿನಲ್ಲಿ ನಮೂದಾಗಿ ಮತ್ತು 6 ನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. ನಿಪಿ-6 ದಾಖಲೆಯಲ್ಲಿ 3 ನೇ ಪ್ರತಿವಾದಿಯ ತನ್ನ ಭಾಗಾಂಶಕ್ಕೆ ಬಂದಂತಹ ಆಸ್ತಿಯನ್ನು ಮಾರಾಟ ಮಾಡುತ್ತಿರುವುದಾಗಿ ಎಂದು

ನಮೂದಾಗಿದೆ ಎಂದರೆ ಸರಿ. ದಿಃ 14-12-2020 ರಂದು 2 ನೇ ಪ್ರತಿವಾದಿ ತನ್ನ ಭಾಗಾಂಶಕ್ಕೆ ಬಂದಂತಹ ಆಸ್ತಿಯನ್ನು 9 ನೇ ಪ್ರತಿವಾದಿಗೆ ನಿಪಿ-7 ಕ್ರಯ ಪತ್ರದಂತೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಿಪಿ-7 ರಂತೆ ಸದರಿ ಆಸ್ತಿಯ ಖಾತೆ ಮತ್ತು ಪಹಣಿಯು 9 ನೇ ಪ್ರತಿವಾದಿಯ ಹೆಸರಿನಲ್ಲಿ ನಮೂದಾಗಿ ಮತ್ತು 9 ನೇ ಪ್ರತಿವಾದಿಯು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. 6 ಮತ್ತು 9 ನೇ ಪ್ರತಿವಾದಿಗಳು ತಾವು ಖರೀದಿ ಮಾಡಿದಂತಹ ಆಸ್ತಿಗಳನ್ನು ಅಭಿವೃದ್ಧಿ ಪಡಿಸಲು ಸಾಕಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 2 ಮತ್ತು 3 ನೇ ಪ್ರತಿವಾದಿಗಳು ಮಾರಾಟ ಮಾಡಿರುವ ಆಸ್ತಿಯ ಸರ್ವೇ ನಂಬರ್ ಗೊತ್ತು ಆದರೆ ಚಕ್ಕುಬಂಧಿ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯು ದಿಃ 13-11-2020 ರಂದು ನಿಪಿ-8 ಕ್ರಯ ಪತ್ರದಂತೆ 7 ನೇ ಪ್ರತಿವಾದಿಗೆ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಅದರಂತೆ ಖಾತೆ ಮತ್ತು ಪಹಣಿಯು 7 ನೇ ಪ್ರತಿವಾದಿಯ ಹೆಸರಿನಲ್ಲಿ ನಮೂದಾಗಿ ಮತ್ತು 7 ನೇ ಪ್ರತಿವಾದಿಯು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. ಪ್ರತಿವಾದಿ 2 ಮತ್ತು 3 ರವರಿಗೆ ತಮ್ಮ ಭಾಗಾಂಶಕ್ಕೆ ನೋಂದಾಯಿತ ವಿಭಾಗ ಪತ್ರದಂತೆ ಬಂದಂತಹ ಆಸ್ತಿಗಳನ್ನು ಪ್ರತಿವಾದಿ 6, 7 ಮತ್ತು 9 ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಗಳು ವಿಭಾಗವನ್ನು ಮಾಡಿಕೊಳ್ಳುವ ಸಮಯದಲ್ಲಿ ತಕರಾರು ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ತಂದೆಗೆ ತಿಳಿಯದೇ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 2017-18 ನೇ ಸಾಲಿನಲ್ಲಿ ನನಗೆ 45 ವರ್ಷ ವಯಸ್ಸು. 2017-18 ರಲ್ಲಿ 1 ರಿಂದ 3 ನೇ ಪ್ರತಿವಾದಿಗಳು ವಿಭಾಗ ಮಾಡಿಕೊಂಡ ಬಗ್ಗೆ ತಕರಾರು ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಆದ ಕಾರಣ ತಕರಾರು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 1 ರಿಂದ 3 ರವರು ವಿಭಾಗ ಮಾಡಿಕೊಂಡಿರುವ ವಿಚಾರ 6 ನೇ ಪ್ರತಿವಾದಿಗೆ ಆಸ್ತಿಯನ್ನು ಮಾರಾಟ ಮಾಡುವ ಸಮಯದಲ್ಲಿ ನನಗೆ ತಿಳಿದಿದ್ದು ತದನಂತರ ನಾನು ತಕರಾರು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ನಾನು ತಹಶೀಲ್ದಾರ್ ರವರ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸಿದ್ದೇನೆ. ಸದರಿ ತಕರಾರನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ಆದರೆ ಸದರಿ

ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರಾ ಅಥವಾ ಇಲ್ಲವಾ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಮತ್ತು ಪ್ರತಿವಾದಿಗಳಿಗೆ ತೊಂದರೆಯನ್ನು ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಮತ್ತು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 6, 7 ಮತ್ತು 9 ರವರು ಖರೀದಿ ಮಾಡಿದ ಆಸ್ತಿಯಲ್ಲಿ ನನಗೆ ಯಾವುದೇ ಭಾಗಾಂಶದ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜ ಮತ್ತು ಮುತ್ತಜ್ಜರ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.